## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1155 |
| ಸದಸ್ಯರ ಹೆಸರು | : ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : 16-12-2025 |
| ಉತ್ತರಿಸುವ ಸಚಿವರು | : ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆ ಲಿಂಗಸುಗೂರು ಮುದಗಲ್ಲ್ ಪಟ್ಟಣಕ್ಕೆ KUIDFC ವತಿಯಿಂದ ಕುಡಿಯುವ ನೀರು ಸರಬರಾಜು ಯೋಜನೆಗೆ ರೂ.44 ಕೋಟಿಗಳ ಅನುದಾನವನ್ನು ನಿಗದಿ ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಆದೇಶ ಸಂಖ್ಯೆ: ನಅಇ 381 ಪಿ.ಆರ್.ಜೆ 2017 ದಿನಾಂಕ:15.12.2017 ರಲ್ಲಿ ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಮುದಗಲ್ ಪಟ್ಟಣದಲ್ಲಿ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ 9 ಪಟ್ಟಣಗಳ ಯೋಜನೆಯಡಿ ಕುಡಿಯುವ ನೀರು ಸರಬರಾಜು ಉನ್ನತೀಕರಣ ಯೋಜನೆ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.<br>ಈ ಯೋಜನೆಗೆ ರೂ.34.96 ಕೋಟಿಗಳ ಅಂದಾಜು ಮೊತ್ತದಲ್ಲಿ ಶೇ.50 ರಷ್ಟು ಮೊತ್ತ ರೂ.17.48 ಕೋಟಿಗಳು ಸರ್ಕಾರದ ಅನುದಾನ ಹಾಗೂ ಶೇ. 50 ರಷ್ಟು ಮೊತ್ತ ರೂ.17.48 ಕೋಟಿಗಳನ್ನು ಪುರಸಭೆಯ ಪರವಾಗಿ ಮಾರುಕಟ್ಟೆ ಸಾಲ ಪಡೆದು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. |
| ಆ) | ನಿಗದಿ ಪಡಿಸಿದ ಅನುದಾನದಲ್ಲಿ ಈವರೆಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; | ನಿಗದಿಪಡಿಸಿದ ಅನುದಾನ ರೂ.17.48 ಕೋಟಿಗಳಲ್ಲಿ ಈವರೆಗೆ ರೂ.6.62 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ವೆಚ್ಚ ಮಾಡಲಾಗಿರುತ್ತದೆ. ಉಳಿದ ಶೇ.50 ರಷ್ಟು ಮೊತ್ತ ರೂ.17.48 ಕೋಟಿಗಳನ್ನು ಮಾರುಕಟ್ಟೆ ಸಾಲ ಪಡೆಯಲು ಸಾಧ್ಯವಾಗದ ಕಾರಣ ಬಾಕಿ ಮೊತ್ತ ಲಭ್ಯವಿರುವುದಿಲ್ಲ. |
| ಇ) | ಬಾಕಿ ಉಳಿದಿರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು; (ಸಂಪೂರ್ಣ ಮಾಹಿತಿ ಒದಗಿಸುವುದು) | ಮುದಗಲ್ ಪಟ್ಟಣದ ಕಾಮಗಾರಿಯನ್ನು ರೂ.31.29 ಕೋಟಿಗಳಲ್ಲಿ ನಿರ್ವಹಿಸಲು ಗುತ್ತಿಗೆದಾರರಾದ ಮೇ\|\| ಎ.ಎಸ್.ಆರ್ ಇಂಜಿನಿಯರಿಂಗ್ & ಪ್ರಾಜೆಕ್ಟ್ಸ್ ಲಿಮಿಟೆಡ್, ಹೈದ್ರಾಬಾದ್ ರವರಿಗೆ ಟೆಂಡರ್ ಮುಖಾಂತರ ದಿನಾಂಕ: 07.03.2018 ರಂದು ಗುತ್ತಿಗೆ ನೀಡಲಾಗಿರುತ್ತದೆ. |
| ಈ) | ಸದರಿ ಕುಡಿಯುವ ನೀರಿನ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಮುಕ್ತಾಯಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು) | ಸದರಿ ಕಾಮಗಾರಿಯನ್ನು ದಿನಾಂಕ:07.03.2018 ರಂದು ಪ್ರಾರಂಭಿಸಲಾಗಿದ್ದು, 18 ತಿಂಗಳೊಳಗೆ (06.09.2019) ಪೂರ್ಣಗೊಳಿಸಬೇಕಾಗಿತ್ತು. ಆದರೆ ಕೋವಿಡ್ 2020 ಹಾಗೂ ಗುತ್ತಿಗೆದಾರರ ವಿಳಂಭ ದೋರಣೆಯಿಂದಾಗಿ ಕೇವಲ ಶೇ.27% ರಷ್ಟು ಪ್ರಗತಿ ಮಾತ್ರ ಸಾಧಿಸಿದ್ದ ಕಾರಣ (ರೂ.6.62 ಕೋಟಿ ವೆಚ್ಚ) ಮುದಗಲ್ ಪಟ್ಟಣದ ಗುತ್ತಿಗೆಯನ್ನು ದಿನಾಂಕ:10.07.2023 ರಂದು |



Scanned with OKEN Scanner

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | ರದ್ದುಪಡಿಸಿ ಕಾಮಗಾರಿಯನ್ನು ಯಥಾಸ್ಥಿತಿಯಲ್ಲಿ ಮುದಗಲ್ ಪುರಸಭೆಗೆ ಹಸ್ತಾಂತರಿಸಲಾಗಿರುತ್ತದೆ.<br><br>ಮುದಗಲ್ ಪಟ್ಟಣದ ಕುಡಿಯುವ ನೀರಿನ ಯೋಜನೆಯ ಬಾಕಿ ಕಾಮಗಾರಿಗಳನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: FD 245 Exp-9/2019 (E), ದಿನಾಂಕ: 23.01.2024 ರಲ್ಲಿ ಅಮೃತ್ 2.0 ರಡಿ ಹಾಗೂ ಕಾಸ್ಟ್ & ರಿಸ್ಕ್ ಮೊತ್ತದಡಿ ಕೈಗೆತ್ತಿಕೊಳ್ಳಲು ಸೂಚನೆ ನೀಡಿರುವ ಮೇರೆಗೆ ಕ್ರಮ ಜರುಗಿಸಲು 7ನೇ ಅಧಿಕಾರಯುತ ಸಮಿತಿ ಸಭೆಯಲ್ಲಿ ಮಂಡಿಸಿದ್ದು ಅನುಮೋದನೆಯಾಗಿರುತ್ತದೆ.<br><br>ಆದರೆ, ಅಮೃತ್ 2.0 ರಡಿ ಬಾಕಿ ಕಾಮಗಾರಿಗಳಿಗೆ ಕೆ.ಯು.ಡಬ್ಲ್ಯೂ.ಎಸ್&ಡಿ.ಬಿಯಲ್ಲಿ ಅನುದಾನದ ಲಭ್ಯತೆ ಇರುವುದಿಲ್ಲ.<br><br>ಮುದಗಲ್ ಪಟ್ಟಣದ ಕುಡಿಯುವ ನೀರಿನ ಯೋಜನೆಯ ಬಾಕಿ ಕಾಮಗಾರಿಗಳನ್ನು ದಿನಾಂಕ:07.03.2018 ರಿಂದ 25.03.2024 ರವರೆಗೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಕೈಗೊಳ್ಳಲಾಗಿದೆ ಹಾಗೂ ಬಾಕಿ ಕಾಮಗಾರಿಗಳನ್ನು ಈಗಾಗಲೇ ರದ್ದು ಮಾಡಿರುವ ಗುತ್ತಿಗೆದಾರರಿಂದ Risk & Cost ಮೊತ್ತವನ್ನು Arrears of land revenue ಆಗಿ ವಸೂಲಿ ಮಾಡಬೇಕಾಗಿರುವ ಮೊತ್ತ ರೂ.7.11 ಕೋಟಿಗಳಾಗಿದ್ದು, ಬಾಕಿ ಸರ್ಕಾರದ ಅನುದಾನ ರೂ.10.86 ಕೋಟಿಗಳು ಹಾಗೂ ಮುದಗಲ್ ಪುರಸಭೆಯ ಪರವಾಗಿ ಶೇ. 50 ರಷ್ಟು ಮಾರುಕಟ್ಟೆ ಸಾಲದ ಮೊತ್ತ ರೂ.17.48 ಕೋಟಿಗಳು ಸೇರಿ ಒಟ್ಟು ಮೊತ್ತ ರೂ.35.45 ಕೋಟಿಗಳನ್ನು ಕ್ರೂಡೀಕರಿಸಿ ಪುರಸಭೆ ವತಿಯಿಂದ ಪುನರ್ ಪ್ರಾರಂಭಿಸಿ ಪೂರ್ಣಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದು. |

ಕಡತ ಸಂಖ್ಯೆ:ನಅಇ 209 ಪಿಆರ್‌ಜೆ 2025

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು



Scanned with OKEN Scanner